2. ಸರ್ಕಾರದ ಭಿತ್ತಿ ಪತ್ರಗಳು ಮತ್ತು ಪ್ರಚಾರ ಪತ್ರಗಳನ್ನು ಅಲ್ಪಸಂಖ್ಯಾಂತರ ಭಾಷೆಯಲ್ಲಿಯೇ ಹೊರಡಿಸಲು ಮತ್ತು

3. ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗಳು ಆದೇಶಗಳು ಇತ್ಯಾದಿ. ರಾಜ್ಯ ಭಾಷೆಯ ಜೊತೆಗೆ ಅಲ್ಪಸಂಖ್ಯಾತರ ಭಾಷೆಯಲ್ಲಿಯೇ ಹೊರಡಿಸಬೇಕೆಂದು ದಿ: 19-3-93ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 223 ಕೆಒಎಲ್ 92 ರಲ್ಲಿ ಆದೇಶಿಸಲಾಗಿದೆ.

ಭಾಷಾ ಅಲ್ಪಸಂಖ್ಯಾತರುಗಳು ಇರುವ ಸ್ಥಳಗಳಿಗೆ ಆಯಾ ಭಾಷೆಗಳನ್ನು ಬಲ್ಲ ನೌಕರರನ್ನು/ ಅಧಿಕಾರಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ನೈಮಾತಿಸಲಾಗುತ್ತದೆ.

2ನೇ ಉಪ ಪ್ರಶ್ನೆಗೆ ನೀಡಿರುವ ಉತ್ತರ ಇದಕ್ಕೂ ಹೊಂದುತ್ತದೆ.

ಹಸಿರು ಕಾರ್ಡಿನ ಫಲಾನುಭವಿಗಳ ಸಂಖ್ಯೆ

372 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?.

ಅ) ಬೀದರ್ ಜಿಲ್ಲೆಯಲ್ಲಿ ಹಸಿರು ಕಾರ್ಡು ಹೊಂದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಇನ್ನೂ ಎಷ್ಟು ಜನರು ಹಸಿರು ಕಾರ್ಡಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಇ) ಅಲೆಮಾರಿ ಜನಾಂಗವಾದ ವಡ್ಡರು, ಕಾಡು ಕುರುಬರು, ಮುಂತಾದ ಜನರುಗಳಿಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

1,81,803 (ತ್ರಿವರ್ಣ)

ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ

ಔರಾದ್	35,209
ಬಸವಕಲ್ಯಾಣ	36,114
ಹುಮ್ನಾಬಾದ್	42,407
ಬಾಲ್ಕಿ	33,895
ಬೀದರ್	34,178
ಒಟ್ಟು	**1,81,803**

ಇಲ್ಲ

ಹಸಿರು (ತ್ರಿವರ್ಣ)ಪಡಿತರ ಚೀಟಿಯನ್ನು ವಾರ್ಷಿಕ ಆದಾಯ ಮಿತಿ ರೂ. 6400ಗಳಿಂತ ಕಡಿಮೆ ಇದ್ದು, ಗ್ರಾಮಾಂತರ ಪ್ರದೇಶದಲ್ಲಿ 20,000 ಜನಸಂಖ್ಯೆಗಿಂತ ಕಡಿಮೆ ಇರುವ ಅರೆಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಘೋಷಿತವಾದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಗಳಿಗೆ ನೀಡಲಾಗುವುದು. ಈ ಅರ್ಹತೆ ಹೊಂದಿದ ಎಲ್ಲಾ ವರ್ಗಗಳ ಜನರಿಗೂ ಈ ಕಾರ್ಡುಗಳನ್ನು ನೀಡಲಾಗುವುದು.

ರೋಗಗ್ರಸ್ತ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರದಿಂದ ನೆರವು.

371 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರವು ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳನ್ನು ರೋಗಗ್ರಸ್ತ ಕೈಗಾರಿಕೆಗಳೆಂದು ಗುರುತಿಸಿದೆ (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಅವುಗಳಿಗೆ ಕೇಂದ್ರ ಸರ್ಕಾರದಿಂದ (ಪುನಶ್ಚೇತನಕ್ಕಾಗಿ)ನೆರವನ್ನೇನಾದರೂ ನೀಡಲಾಗಿದೆಯೇ (ಜಿಲ್ಲಾವಾರು ಅಂಕಿಅಂಶಗಳನ್ನು ನೀಡುವುದು).

ಶ್ರೀ ರಾಮಲಿಂಗರೆಡ್ಡಿ

(ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು)

1985ನೇ ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನ ಕಾಯ್ದೆ (ವಿಶೇಷ ಉಪಬಂಧ)ಪ್ರಕಾರ, ಕೈಗಾರಿಕಾ ಘಟಕವು ಪ್ರಾರಂಭಿಸಿದ ದಿನದಿಂದ ನಿರಂತರವಾಗಿ ಐದು ವರ್ಷಗಳವರೆಗೆ ನಡೆದು, ಈ ಅವಧಿಯಲ್ಲಿ ಅದು ಭರಿಸಿದ ನಷ್ಟದ ಪ್ರಮಾಣವು ತಾನು ಹೊಂದಿರುವ ನಿವ್ವಳ ಆಸ್ತಿಯ ಸರಿಸಮಕ್ಕೆ ಅಥವಾ ಹೆಚ್ಚಾಗಿ ಇದ್ದಲ್ಲಿ ಘಟಕದ ಪುನಃಶ್ಚೇತನಕ್ಕೆ ಬಿ.ಐ.ಎಫ್.ಆರ್.ಸಂಸ್ಥೆಯಲ್ಲಿ ರೋಗಗ್ರಸ್ತ ಘಟಕವೆಂದು ನೊಂದಾಯಿತ ಬೇಕಾಗುತ್ತದೆ. ಈ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟು (1985ರಿಂದ ದಿನಾಂಕ 31.01.94ರವರೆಗೆ) 113 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ರೋಗಗ್ರಸ್ತ ಘಟಕಗಳ ಪುನಃಶ್ಚೇತನಕ್ಕೆ ಯೋಜನೆಯಡಿಯಲ್ಲಿ ಬಿ.ಐ.ಎಫ್.ಆರ್.ಸಂಸ್ಥೆಯಲ್ಲಿ ನೊಂದಾಯಿಸಿದೆ. (ಪಟ್ಟಿ ಲಗತ್ತಿಸಿದೆ).

ಮೇಲೆ ಉಲ್ಲೇಖಿಸಿದ ಕಾಯ್ದೆಯ ಪ್ರಕಾರ ಕೇಂದ್ರ ಸರ್ಕಾರವು: ರಾಜ್ಯ ಸರ್ಕಾರವು : ಹಣಕಾಸು ಸಂಸ್ಥೆಗಳು: ಬ್ಯಾಂಕುಗಳು ಬಿ.ಐ.ಎಫ್.ಆರ್. ಆದೇಶದ ಪ್ರಕಾರ ನೆರವನ್ನು ನೀಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಬಿ.ಐ.ಎಫ್.ಆರ್. ಆದೇಶದ ಪ್ರಕಾರ ಈ ಸೌಲಭ್ಯಗಳನ್ನು ನೀಡಲಾಗುತ್ತದೆ.

ANNEXURE

DISTRICTWISE LIST OF SICK INDUSTRIAL UNITS (BIFR CASES)

1.	Bangalore	40
2.	Belgaum	1
3.	Bellary	3
4.	Bijapur	-3
5.	Bidar	1
6.	Chickmagalur	-1
7.	Chitradurga	10
8.	Coorg	-
9.	Dharwad	5
10.	Gulbarga	-5
11.	Hassan	-
12.	Uttara Kannada	1
13.	Dakshina Kannada	5
14.	Kolar	3
15.	Mandya	-
16.	Mysore	27
17.	Raichur	-5

18.	Shimoga	1
19.	Tumkur	2
	Total	113

ಬೀದರ್ ಜಿಲ್ಲೆಯಲ್ಲಿ ನಡೆದ ಕೊಲೆ ದರೋಡೆ ವರದಕ್ಷಿಣೆ ಪ್ರಕರಣಗಳ ಸಂಖ್ಯೆ

370 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಕೊಲೆ ದರೋಡೆ, ವರದಕ್ಷಿಣೆ ಪ್ರಕರಣಗಳು ಹಾಗೂ ಕೊಲೆ ಯತ್ನದ ಪ್ರಕರಣಗಳು ಎಷ್ಟು ನಡೆದಿವೆ? (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಅವುಗಳನ್ನು ತಡೆಗಟ್ಟಲು ಯಾವವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) 1993ನೇ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ಒಟ್ಟು 39 ಕೊಲೆ ಪ್ರಕರಣಗಳು, 10 ದರೋಡೆ ಪ್ರಕರಣಗಳು 6 ವರದಕ್ಷಿಣೆ ಪ್ರಕರಣಗಳು ಮತ್ತು 56 ಕೊಲೆ ಪ್ರಕರಣಗಳು ವರದಿಯಾಗಿರುತ್ತವೆ.

ತಾಲ್ಲೂಕುವಾರು ಅಂಕಿಅಂಶಗಳು ಈ ಕೆಳಕಂಡಂತೆ ಇವೆ. 1-1-93 ರಿಂದ 31-12-93ರವರೆಗೆ

	ತಾಲ್ಲೂಕು	ಕೊಲೆ	ದರೋಡೆ	ವರದಕ್ಷಿಣೆ ಸಾವು	ಕೊಲೆ ಪ್ರಯತ್ನ
1.	ಬೀದರ್	13	3	2	20
2.	ಔರಾದ್	5	4	1	2
3.	ಹುಮನಾಬಾದ್	7	2	-	11
4.	ಭಾಲ್ಕಿ	5	-	1	19
5.	ಬಸವಕಲ್ಯಾಣ	9	1	2	4
	ಒಟ್ಟು	39	10	6	56

ಸಾಮಾನ್ಯವಾಗಿ ಕೊಲೆಯ ಪ್ರಕರಣಗಳು ಆಸ್ತಿವಿವಾದ ಕೋಮುಗಲಭೆ, ಪ್ರೇಮ ಪ್ರಕರಣ, ಹಳೇ ವೈಷಮ್ಯ ಮುಂತಾದ ಕಾರಣಗಳಿಂದ ಕೊಲೆಗಳು ಹೆಚ್ಚಾಗಿ ಸಂಬಂಧಿಸುತ್ತವೆ.ಹಾಗೂ ರೌಡಿಗಳ ವೈಷಮ್ಯದಿಂದಲೂ ಬಹಳಷ್ಟು ಕೊಲೆಯ ಪ್ರಕರಣಗಳು ಕಂಡು ಬರುತ್ತವೆ.

ಭೂ ವಿವಾದಗಳಿರುವ ಪ್ರದೇಶಗಳಲ್ಲಿ ಭಾ.ದಂ.ಸಂ. 145 ಪ್ರಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಮುಂಚಿತವಾಗಿಯೇ ವರದಿ ಮಾಡಲಾಗುತ್ತಿದೆ. ಹಳ್ಳಿಗಳಲ್ಲಿ ಗಸ್ತು ಮಾಡುವ ಪೊಲೀಸ್ ಅಧಿಕಾರಿಗಳು ವೈಷಮ್ಯ ಹೆಚ್ಚಾಗುವ ಹಳ್ಳಿಗಳನ್ನು ಗುರುತಿಸಿ ಮಂಜಾಗೃತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆದೇಶಿಸಲಾಗಿದೆ. ಮತೀಯ ಮತ್ತು ಜಾತಿ ವೈಷಮ್ಯಗಳ ಪ್ರಕರಣಗಳಲ್ಲಿ ಕೊಲೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ವಿವಾದಗಳಿರುವ ಸ್ಥಳಗಳಲ್ಲ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಹಾಗೂ ಶಾಂತಿ ಸಭೆಗಳನ್ನು ನಡೆಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ದರೋಡೆ ಪ್ರಕರಣಗಳು ಲಾಭಕ್ಕಾಗಿ ಮತ್ತು ಕೋಮು ಗಲಭೆಗಳಿಂದ ನಡೆಯುವಂತಹ ಪ್ರಕರಣಗಳಾಗಿರುತ್ತವೆ. ದರೋಡೆಗಳನ್ನು ತಡೆಗಟ್ಟಲು ಜಿಲ್ಲಾ ಪೊಲೀಸು ಅಧಿಕಾರಿಗಳು ವಿಭಾಗೀಯ ಪೊಲೀಸು ಅಧಿಕಾರಿಗಳಿಗೆ ಜಾಗರೂಕರಾಗಿರುವಂತೆ ಮೇಲಿಂದ ಮೇಲೆ ಆದೇಶಗಳನ್ನು ನೀಡಲಾಗುತ್ತಿದೆ. ಅಂತರರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕಮ್ಮಟಗಳನ್ನು ಏರ್ಪಡಿಸಿ ದರೋಡೆ ತಡೆ ಮತ್ತು ಪತ್ತೆ ಬಗ್ಗೆ ವಿಚಾರ ವಿನಿಯಮ ನಡೆಸಿ ದರೋಡೆ ನಿಯಂತ್ರಣ ಮತ್ತು ಪತ್ತೆಗೆ ಪ್ರಯತ್ನಿಸಲಾಗಿದೆ.